**ಕರ್ನಾಟಕ ಸರ್ಕಾರದ ನಡವಳಿ**

**ವಿಷಯ:** ಸರ್ಕಾರಿ ನೌಕರರಾದ ಶ್ರೀ ವೆಂಕಟರವಣಪ್ಪ, ಕಾರ್ಯದರ್ಶಿ, ರಾಜವಂತಿ ಗ್ರಾಮ ಪಂಚಾಯಿತಿ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ ಇವರ ಕರ್ತವ್ಯಲೋಪದ ಬಗ್ಗೆ.

**ಓದಲಾಗಿದೆ:** ಮಾನ್ಯ ನಿಬಂಧಕರು, ಮಾನ್ಯ ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಅರೆ ಸರ್ಕಾರಿ ಪತ್ರ ಸಂಖ್ಯೆ: D.O.No.Compt/BD/7814/2015/ARLO-2 ದಿನಾಂಕ: 02-05-2017.

**ಪ್ರಸ್ತಾವನೆ:**

ಈ ಪ್ರಕರಣದಲ್ಲಿ ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಪತ್ರದ ಸಂಗಡ ಲಗತ್ತಿಸಿರುವ ಮಾನ್ಯ ಉಪಲೋಕಾಯುಕ್ತ ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ ಪ್ರಕರಣ 12(1) ಮತ್ತು 12(3)ರ ಅಡಿಯಲ್ಲಿ ಸಲ್ಲಿಸಿರುವ ವರದಿಯಲ್ಲಿ, ಶ್ರೀ ಶಂಕರ ನಾಯಕ್, ಕಣಿವೇನಹಳ್ಳಿ ತಾಂಡಾ, ಪಾವಗಡ ತಾಲ್ಲೂಕು, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ ವೆಂಕಟರವಣಪ್ಪ, ಕಾರ್ಯದರ್ಶಿ, (2) ಶ್ರೀ ಶ್ರೀನಿವಾಸ, ಬಿಲ್ ಕಲೆಕ್ಟರ್, (3)ಶ್ರೀ ರಾಮಕೃಷ್ಣ ರೆಡ್ಡಿ, ಅಧ್ಯಕ್ಷರು, ಹಾಗೂ (4) ಶ್ರೀ ನಾಗರಾಜು ನಾಯಕ್, ನೀರುಗಂಟಿ, ರಾಜವಂತಿ ಗ್ರಾಮ ಪಂಚಾಯಿತಿ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ, (ಇನ್ನು ಮುಂದೆ ಕ್ರಮವಾಗಿ 1 ರಿಂದ 4 ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆಂದು ತಿಳಿಸಿರುತ್ತಾರೆ.

**ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕಿನಲ್ಲಿ ರಾಜವಂತಿ ಗ್ರಾಮ ಪಂಚಾಯತಿಯಲ್ಲಿ 2012-13 ಮತ್ತು 2013-14 ಸಾಲಿನಲ್ಲಿ ಮಂಜೂರಾದ ಅನುದಾನವನ್ನು ಎದುರುದಾರರು ದುರುಪಯೋಗಪಡಿಸಿಕೊಂಡಿರುತ್ತಾರೆ. ಕುತಿನಿಹಳ್ಳಿ ತಾಂಡಾದಲ್ಲಿ ನೀರು ನಿರ್ವಹಣೆಗಾಗಿ 2013-14 ಸಾಲಿನಲ್ಲಿ ರೂ.60,000/-ಗಳ ಹಗರಣ ಮಾಡಿರುತ್ತಾರೆ. ಆದ್ದರಿಂದ ಈ ಬಗ್ಗೆ ತನಿಖೆ ಮಾಡಿ ಎದುರುದಾರರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ದೂರು ಸಲ್ಲಿಸಿದ್ದಾರೆ.

1 ಮತ್ತು 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ 2012-13ನೇ ಸಾಲಿನ ಹಣಕಾಸು ಯೋಜನೆಯಲ್ಲಿ ರೂ.7,95,000/-ಗಳಿಗೆ ಕ್ರಿಯಾ ಯೋಜನೆಯನ್ನು ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ಅನುಮೋದನೆ ಪಡೆದು, ನಂತರ ತಾಲ್ಲೂಕು ಪಂಚಾಯತಿಯಿಂದ ಅನುಮೋದನೆ ಪಡೆದು ರಾಜವಂತಿ ಗ್ರಾಮ ಪಂಚಾಯತಿಯಿಂದ ತಾಂಡಾ ಗ್ರಾಮಗಳಾದ ರಾಜವಂತಿ, ಆರ್.ಹೊಸಕೋಟೆ, ಸಿ.ಎನ್.ಹಳ್ಳಿ, ಕಣಿವೆಹಳ್ಳಿ, ಐವಾರಲಹಳ್ಳಿ, ಮೇಡಿಹಳ್ಳಿ, ಕಣಿವೆಹಳ್ಳಿ, ಡಿ.ಎನ್.ಬೆಟ್ಟ, ಮತ್ತು ನಾಯ್ಕನಹಟ್ಟಿಗಳಿಗೆ ಕುಡಿಯುವ ನೀರು ನಿರ್ವಹಣೆ ವೆಚ್ಚ ಅಂದರೆ ಹ್ಯಾಂಡ್‌ಪಂಪ್ ರಿಪೇರಿ, ಸ್ಟಾರ್ಟರ್ ರಿಪೇರಿ, ಮೋಟರ್ ಮತ್ತು ಪಂಪ್ ನಿರ್ವಹಣೆಗೆ ಖರ್ಚು ಮಾಡಲಾಗಿರುತ್ತದೆ.

2013-14 ನೇ ಸಾಲಿನಲ್ಲಿ ರೂ.8,40,000/-ಗಳಿಗೆ ಕ್ರಿಯಾ ಯೋಜನೆಯನ್ನು ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ಅನುಮೋದನೆ ಪಡೆದು, ನಂತರ ತಾಲ್ಲೂಕು ಪಂಚಾಯತಿಯಿಂದ ಅನುಮೋದನೆ ಪಡೆದು ರಾಜವಂತಿ ಗ್ರಾಮ ಪಂಚಾಯತಿಯಿಂದ ಗ್ರಾಮಗಳಾದ ರಾಜವಂತಿ, ಆರ್.ಹೊಸಕೋಟೆ, ಸಿ.ಎನ್.ಹಳ್ಳಿ, ಕಣಿವೆಹಳ್ಳಿ, ಐವಾರಲಹಳ್ಳಿ, ಮೇಡಿಹಳ್ಳಿ, ಕಣಿವೆಹಳ್ಳಿ ತಾಂಡಾ, ಡಿ.ಎನ್.ಬೆಟ್ಟ, ಮತ್ತು ನಾಯ್ಕನಹಟ್ಟಿಗಳಿಗೆ ಕುಡಿಯುವ ನೀರು ನಿರ್ವಹಣೆ ವೆಚ್ಚ ಅಂದರೆ ಹ್ಯಾಂಡ್‌ಪಂಪ್ ರಿಪೇರಿ, ಸ್ಟಾರ್ಟರ್ ರಿಪೇರಿ, ಮೋಟರ್ ಮತ್ತು ಪಂಪ್ ನಿರ್ವಹಣೆಗೆ ಖರ್ಚು ಮಾದಲಾಗಿರುತ್ತದೆ. ಅಂಗವಿಕಲರ ಕಲ್ಯಾಣಕ್ಕಾಗಿ ಶೇ.3%ರಷ್ಟು ಅಂದರೆ, ರೂ.25,200/-ಗಳನ್ನು ವಿನಿಯೋಗಿಸಲಾಗಿದೆ. ಆದ್ದರಿಂದ ದೂರುದಾರರ ಆಪಾದನೆಯಲ್ಲಿ ಹುರುಳಿಲ್ಲದ ಕಾರಣ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

2 ಮತ್ತು 4ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತವು ಕ್ರಮವಾಗಿ ಬಿಲ್ ಕಲೆಕ್ಟರ್ ಮತ್ತು ವಾಟರ್ಮನ್ ಹುದ್ದೆ ನಿರ್ವಹಿಸುತ್ತಿದ್ದು, ತಮಗೆ ಗ್ರಾಮ ಪಂಚಾಯತಿಗೆ ಮಂಜೂರಾದ ಅನುದಾನವನ್ನು ಖರ್ಚು ಮಾಡುವ ಅಧಿಕಾರ ಇರುವುದಿಲ್ಲವಾದ್ದಾರಿಂದ ತಾವು ಯಾವುದೇ ಹಗರಣ ಮಾಡಿರುವುದಿಲ್ಲ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ. ದೂರುದಾರರು ತಮ್ಮ ಪ್ರತ್ಯುತ್ತರ ಸಲ್ಲಿಸಿರುವುದಿಲ್ಲ.

ದೂರುದಾರರು ಹಾಜರುಪಡಿಸಿದ ದೂರು ಮತ್ತು ದಾಖಲಾತಿಗಳು, ಅಕ್ಷೇಪಣೆ ಮತು ದಾಖಲಾತಿಗಳನ್ನು ಪರಿಶೀಲಿಸಿದಾಗ, ರಾಜವಂತಿ ಗ್ರಾಮಪಂಚಾಯತಿಯಲ್ಲಿ 2012–13ನೇ ಸಾಲಿನಲ್ಲಿ ರೂ.7,95,000/– ಮತ್ತು 2013–14ನೇ ಸಾಲಿನಲ್ಲಿ ರೂ.8,40,000/–ಗಳ ಕ್ರಿಯಾ ಯೋಜನೆ ತಯಾರಿಸಿ ಅನುಮೋದನೆ ಪಡೆದು ಖರ್ಚು ಮಾಡಲಾಗಿದೆಯೆಂದು 1 ಮತ್ತು 3ನೇ ಎದುರುದಾರರು ತಿಳಿಸಿರುತ್ತಾರೆ. ಆದರೆ, ಮಂಜೂರಾದ ಈ ಅನುದಾನವನ್ನು ಯಾವ ಕೆಲಸಕ್ಕೆ ಎಷ್ಟು ವ್ಯಯಿಸಲಾಗಿದೆ ಎನ್ನುವ ಬಗ್ಗೆ ಯಾವುದೇ ದಾಖಲೆಯನ್ನು ಸಲ್ಲಿಸಿರುವುದಿಲ್ಲ.

ಮೆಲ್ಕಾಣಿಸಿದ 2 ಸಾಲಿನಲ್ಲಿ ಒಟ್ಟು ಅನುದಾನವೆಷ್ಟು, ಎನ್ನುವ ಬಗ್ಗೆಯೂ ನಮೂನೆ ಇರುವುದಿಲ್ಲ. ಆದರೆ ಈ ಎರಡೂ ಸಾಲಿನಲ್ಲಿ ಮಂಜೂರಾದ ಅನುದಾನಕ್ಕೆ ಕ್ರಿಯಾ ಯೋಜನೆ ತಯಾರಿಸಿ ಅನುಮೋದನೆ ಪಡೆದು ಖರ್ಚು ಮಾಡಲಾಗಿದೆ ಎನ್ನುವುದನ್ನು ಮಾತ್ರ ಉಲ್ಲೆಖಿಸಿರುತ್ತಾರೆ. ಆದರೆ ಇಲ್ಲಿ ಅನುದಾನ ಖರ್ಚು ಮಾಡಲಾಗಿದೆ ಎನ್ನುವ ಬಗ್ಗೆ ದೂರು ಇರುವುದಿಲ್ಲ. ಆದರೆ ಖರ್ಚು ಮಾಡಿದ ಅನುದಾನದಲ್ಲಿ ಹಗರಣ ಮಡಲಾಗಿದೆಯೆಂದು ದೂರಿನಲ್ಲಿ ಉಲ್ಲೇಖಿಸಿರುವುದರಿಂದ ಈ ಅನುದಾನವನ್ನು ಯಾವ್ಯಾವ ಯೋಜನೆಗೆ ಎಷ್ಟು ಹಣ ವಿನಿಯೋಗಿಸಲಾಯಿತು, ಯಾವ ವಸ್ತುಗಳಿಗೆ ಯಾವ ದರ ನಿಗಧಿಪಡಿಸಲಾಗಿತ್ತು, ಎಷ್ಟು ಹ್ಯಾಂಡ್‌ಪಂಪ್‌ಗಳನ್ನು ರಿಪೇರಿ ಮಾಡಿಸಲಾಯಿತು, ಎಷ್ಟು ಮೋಟರ್, ಸ್ಟಾರ್ಟರ್ ರಿಪೇರಿ ಮಾಡಲಾಯಿತು ಎನ್ನುವ ಬಗ್ಗೆ ಅಂಕಿಅಂಶ ಸಹಿತ ಎದುರುದಾರರು ಮಾಹಿತಿ ನೀಡಬೇಕಾಗಿತ್ತು. ಆದರೆ ಈ ಬಗ್ಗೆ ಅವರು ಬಹಿರಂಗಗೊಳಿಸದೆ ಕೇವಲ ಕುಡಿಯುವ ನೀರಿನ ನಿರ್ವಹಣೆಗಾಗಿ ಅನುದಾನ ಖರ್ಚು ಮಾಡಲಾಯಿತು ಎಂದು ತಿಳಿಸಿರುವುದರಿಂದ, ಅವರು ನೀಡಿರುವ ಮಾಹಿತಿಯು ತೃಪ್ತಿಕರವೆನಿಸುವುದಿಲ್ಲ. ಆದ್ದರಿಂದಲೇ 1 ಮತ್ತು 3ನೇ ಎದುರುದಾರರು 2012–13, 2013–14 ನೇ ಸಾಲಿನಲ್ಲಿ ಕ್ರಮವಾಗಿ ರೂ.7,95,000/– ಮತ್ತು ರೂ.8,40,000/– ಮಂಜೂರಾದ ಅನುದಾನದಲ್ಲಿ ಹಗರಣ ಮಾಡಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

2 ಮತ್ತು 4ನೇ ಎದುರುದಾರರು ಬಿಲ್ ಕಲೆಕ್ಟರ್ ಹಾಗೂ ವಾಟರ್‌ಮನ್ ಗಳಾಗಿರುವುದರಿಂದ ಅನುದಾನ ಖರ್ಚು ಮಾಡುವ ಅಧಿಕಾರ ಅವರಿಗೆ ಇರದ ಕಾರಣ ಇವರನ್ನು ಪ್ರಕರಣದಿಂದ ಕೈಬಿಡಲಾಗಿದೆ. 3ನೇ ಎದುರುದಾರು ರಾಜವಂತಿ ಗ್ರಾಮ ಪಂಚಾಯತಿಯ ಅಧ್ಯಕ್ಷರಾಗಿರುವುದರಿಂದ ಅವರಿಗೆ ಕೆ.ಸಿ.ಎಸ್ ನಿಯಮಗಳು ಅನ್ವಯಿಸುವುದಿಲ್ಲ. ಆದರೆ, ಮೇಲೆ ನಮೂದಿಸಿದ ಪಂಚಾಯತಿ ಅನುದಾನದಲ್ಲಿ ಹಗರಣದಲ್ಲಿ ಅವರೂ ಭಾಗಿಯಾಗಿರುವುದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ.12(1)ರಡಿಯಲ್ಲಿ ಅವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. 1ನೇ ಎದುರುದಾರರು ಗ್ರಾಮ ಪಂಚಾಯತಿ ಅನುದಾನದ ಹಗರಣದಲ್ಲಿ ಭಾಗಿಯಾಗಿರುವುದರಿಂದ ಅವರು ಕರ್ತವ್ಯ ದುರುಪಯೋಗಪಡಿಸಿಕೊಂಡಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

ಶ್ರೀ ವೆಂಕಟರವಣಪ್ಪ, ಕಾರ್ಯದರ್ಶಿ, ರಾಜವಂತಿ ಗ್ರಾಮ ಪಂಚಾಯಿತಿ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ, ಇವರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ ನಿಯಮ 3(1) (i) ಮತ್ತು (ii)ರನ್ವಯ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುವುದು ಕಂಡುಬಂದಿರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಎದುರುದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು, ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿರ್ಭಂಧ, ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14–ಎ ರಡಿಯಲ್ಲಿ ಸದರಿಯವರ ವಿರುದ್ಧ ಇಲಾಖಾ ವಿಚಾರಣೆಯನ್ನು ಈ ಪ್ರಾಧಿಕಾರಕ್ಕೆ ವಹಿಸಬೇಕೆಂದು ಕೋರಿದೆ.

ಶ್ರೀ ವೆಂಕಟರವಣಪ್ಪ ಕಾರ್ಯದರ್ಶಿ, ರಾಜವಂತಿ ಗ್ರಾಮ ಪಂಚಾಯಿತಿ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆಯಾದ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14–ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/412/ಗ್ರಾಪಂಕಾ/2017 ಬೆಂಗಳೂರು, ದಿನಾಂಕ: 29-05-2017.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ವೆಂಕಟರವಣಪ್ಪ ಕಾರ್ಯದರ್ಶಿ, ರಾಜವಂತಿ ಗ್ರಾಮ ಪಂಚಾಯಿತಿ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ, ಇವರ ವಿರುದ್ಧದ ಆಪಾದನೆಗಳ ಬಗ್ಗೆ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14(ಎ) ರನ್ವಯ ಈ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ವಹಿಸಲಾಗಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 9 ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ:**

1) ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಪುಟ ಸಂಖ್ಯೆ 1 ರಿಂದ 38 ರವರೆಗಿನ ಮೂಲದಾಖಲೆಗಳನ್ನು ಈ ಪತ್ರದೊಂದಿಗೆ ಹಿಂದಿರುಗಿಸಲಾಗಿದೆ)
4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ತುಮಕೂರು ಜಿಲ್ಲೆ.
5) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ.
6) ಶ್ರೀ ವೆಂಕಟರವಣಪ್ಪ ಕಾರ್ಯದರ್ಶಿ, ರಾಜವಂತಿ ಗ್ರಾಮ ಪಂಚಾಯಿತಿ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ.
7) ಗಣಕ ಕೋಶ-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
8) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.